ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂ: **DTE-ADMI0SCH/9/2021**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ ಬೆಂಗಳೂರು - 560 001.
ದಿನಾಂಕ: 07-09-2021

**-:: ಸುತ್ತೋಲೆ ::-**

**ವಿಷಯ :** 2021-22ನೇ ಸಾಲಿಗೆ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ವಿದ್ಯಾರ್ಥಿಗಳು ಎ.ಐ.ಸಿ.ಟಿ.ಇ ಯ ಪ್ರಗತಿ ಮತ್ತು ಸಕ್ಷಮ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

**ಉಲ್ಲೇಖ :** ಸದಸ್ಯ ಕಾರ್ಯದರ್ಶಿಗಳು, ಎ.ಐ.ಸಿ.ಟಿ.ಇ ಇವರ ಅಧಿಸೂಚನ ಪತ್ರ ಸಂಖ್ಯೆ: AICTE/StDC/Pragati & Saksham/2021-22, Date: 26-08-2021.

**-000000-**

ಎ.ಐ.ಸಿ.ಟಿ.ಇ ಯಿಂದ ಮಾನ್ಯತೆ ಪಡೆದಿರುವ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳ ಪ್ರಗತಿಗಾಗಿ, ಆರ್ಥಿಕ ನೆರವು ನೀಡಲು ಎ.ಐ.ಸಿ.ಟಿ.ಇ ಯು ಪ್ರಗತಿ ಮತ್ತು ಸಕ್ಷಮ್ ವಿದ್ಯಾರ್ಥಿವೇತನ ಯೋಜನೆಗಳನ್ನು ಈ ಕೆಳಕಂಡಂತೆ ಪ್ರಾರಂಭಿಸಲಾಗಿರುತ್ತದೆ.

1. **ಪ್ರಗತಿ ವಿದ್ಯಾರ್ಥಿವೇತನ ಯೋಜನೆ -**

   ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ವಿದ್ಯಾರ್ಥಿನಿಯರಿಗೆ.

2. **ಸಕ್ಷಮ್ ವಿದ್ಯಾರ್ಥಿವೇತನ ಯೋಜನೆ -**

   ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬದ ವಾರ್ಷಿಕ ಆದಾಯ ರೂ.8.00 ಲಕ್ಷ ಮಿತಿಯೊಳಗೆ ಇರುವ ಶೇ.40ಕ್ಕಿಂತ ಹೆಚ್ಚು ವಿಶೇಷ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳಿಗೆ.

ಮುಂದುವರೆದು, ಉಲ್ಲೇಖದ ಅಧಿಸೂಚನಯಲ್ಲಿ ತಿಳಿಸಿರುವಂತೆ 2021-22ನೇ ಸಾಲಿಗೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿನಿಯರು ಮತ್ತು ವಿಶೇಷ ಸಾಮರ್ಥ್ಯದ ಮಕ್ಕಳಿಗೆ ಮಾತ್ರ ಎ.ಐ.ಸಿ.ಟಿ.ಇ ಯ ಪ್ರಗತಿ ಮತ್ತು ಸಕ್ಷಮ್ ವಿದ್ಯಾರ್ಥಿವೇತನ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಅದರಂತೆ 2018-19ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಪ್ರವೇಶ ಪಡೆದ ಅರ್ಹ ವಿದ್ಯಾರ್ಥಿಗಳು ನವೀಕರಣಕ್ಕೆ ಮತ್ತು 2021-22ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ದಿನಾಂಕ: 30-11-2021 ರಂದು ಕೊನೆದಿನಾಂಕವಾಗಿದೆ, ಅದರಂತೆ ಈ ಕೆಳಗಿನ ತಃಖ್ತೆಯಲ್ಲಿ ತಿಳಿಸಿರುವ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

| Sl. No | Scheme | Portal address |
|---|---|---|
| 1 | **AICTE Pragati Scholarship Scheme** (Fresh applications 2021-2022 Batch & Renewal application 2020-2021 Batch) | National Scholarship Portal **http://scholarship.gov.in** |
| 2 | **AICTE Pragati Scholarship Scheme** (Renewal application 2018-19 & 2019-20 Batch) | AICTE web Portal **http://www.aicte-pragati-saksham-gov.in** |
| 3 | **AICTE Saksham Scholarship Scheme** (Fresh applications 2021-2022 Batch & Renewal application 2020-2021 Batch) | National Scholarship Portal **http://scholarship.gov.in** |
| 4 | **AICTE Saksham Scholarship Scheme** (Renewal application 2018-19 & 2019-20 Batch) | AICTE web Portal **http://www.aicte-pragati-saksham-gov.in** |

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ತಿಳಿಸಿರುವ ಎ.ಐ.ಸಿ.ಟಿ.ಇ ಯ, ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

https://www.aicte-india.org/schemes/students-development-schemes/Saksham/General-Instructions

https://www.aicte-india.org/schemes/students-development-schemes/Pragati/General-Instructions

**(ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

**ಇವರಿಗೆ,**

**ಪ್ರಾಂಶುಪಾಲರು, ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನಿದಾನರಹಿತ ಖಾಸಗಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳು- ಮುಂದಿನ ಅಗತ್ಯ ಕ್ರಮಕ್ಕಾಗಿ (ಸಂಸ್ಥೆಯ ಸೂಚನ ಫಲಕಗಳಲ್ಲಿ & ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸುವುದು.**